ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1579(1839)

ಸದಸ್ಯರು ಹೆಸರು : ಶ್ರೀ ಹೆಚ್.ಎಂ.ರಮೇಶ ಗೌಡ(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 15.03.2022

ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿನ ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವೃಂದವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿನ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ 6794 ಖಾಯಂ ಹಾಗೂ 7969 ಗುತ್ತಿಗೆ/ಹೊರಗುತ್ತಿಗೆ/ದಿನಗೂಲಿ/ನೇರ ಪಾವತಿಯಡಿ ಸೇರಿ ಒಟ್ಟು 14763 ಅಧಿಕಾರಿ/ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ವೃಂದವಾರು ಮಾಹಿತಿ ***ಅನುಬಂಧದಲ್ಲಿ ಲಗತ್ತಿಸಿದೆ.***
ಆ)	ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ನಿವೃತ್ತಿ ಮತ್ತು ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡದ ಕಾರಣ ಕಛೇರಿ ಕೆಲಸಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿನ ಪುರಸಭೆಗಳಲ್ಲಿ 17930 ಮಂಜೂರಾದ ಹುದ್ದೆಗಳಿಗೆದುರಾಗಿ 11136 ಹುದ್ದೆಗಳು ಖಾಲಿ ಇದ್ದರೂ, ಹಾಲಿ ಕಾರ್ಯ ನಿರ್ವಹಿಸುತ್ತಿರುವ 6794 ಖಾಯಂ ಹಾಗೂ 7969 ಗುತ್ತಿಗೆ/ಹೊರಗುತ್ತಿಗೆ/ ದಿನಗೂಲಿ/ನೇರಪಾವತಿ ನೌಕರರು ಸೇರಿ ಒಟ್ಟು 14763 ಅಧಿಕಾರಿ/ ನೌಕರರುಗಳಿಂದಲೇ ಪುರಸಭೆಗಳ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲಾಗುತ್ತಿದೆ.
ಇ)	ಬಂದಿದ್ದಲ್ಲಿ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿಯನ್ನು ಒದಗಿಸುವುದು)	ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ. ಅದರಂತೆ ಕರ್ನಾಟಕ ಲೋಕಸೇವಾ ಆಯೋಗದಿಂದ 1104 ನೇಮಕಾತಿ ಹುದ್ದೆಗಳಿಗೆ ಸ್ವೀಕೃತವಾದ ಅಂತಿಮ ಆಯ್ಕೆಪಟ್ಟಿಯನುಸಾರ 771 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಉಳಿದ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲನೆ ಯಲ್ಲಿರುತ್ತದೆ. ಇದಲ್ಲದೆ 553 ಹುದ್ದೆಗಳ ಅಂತಿಮ ಆಯ್ಕೆಯ ಪ್ರಕ್ರಿಯೆಯು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಚಾಲ್ತಿಯಲ್ಲಿದ್ದು, ಆಯೋಗದಿಂದ ಅಂತಿಮ ಆಯ್ಕೆಪಟ್ಟಿ ಸ್ವೀಕೃತವಾದ ಕೂಡಲೇ ದಾಖಲಾತಿ ಪರಿಶೀಲನೆ ಮಾಡಿ, ನೈಜತೆ ಪ್ರಮಾಣಪತ್ರವನ್ನಾಧರಿಸಿ ನೇಮಕಾತಿ ಆದೇಶ ನೀಡುವ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು.

		ಮುಂದುವರೆದು, ಮುಂಬಡ್ತಿ ಖೋಟಾದಡಿಯಲ್ಲಿ ಖಾಲಿ ಇರುವ ಗ್ರೂಪ್ "ಬಿ" ಮತ್ತು "ಸಿ" ವೃಂದದ ಹುದ್ದೆಗಳನ್ನು ನಿಯಮಾನುಸಾರ ಭರ್ತಿಮಾಡಲು ಕ್ರಮ ವಹಿಸಲಾಗುತ್ತಿದೆ. ಸರ್ಕಾರದ ಆದೇಶಗಳನುಸಾರ ಕೆಲವು ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಮತ್ತು ನೇರಪಾವತಿಯಡಿ ಪಡೆಯಲು ಅವಕಾಶವಿದ್ದು, ಅದರಂತೆ ಹೊರಗುತ್ತಿಗೆ ಮತ್ತು ನೇರನೇಮಕಾತಿಯಡಿ ಹುದ್ದೆಗಳನ್ನು ಭರ್ತಿ ಮಾಡಲುಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ನಅಇ 03 ಎಲ್‌ಸಿಕ್ಯೂ 2022

(ಎನ್.ನಾಗರಾಜು ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

ಅನುಬಂಧ					
ಕ್ರ. ಸಂ.	ಹುದ್ದೆಗಳ ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	ದಿನಗೂಲಿ/ಗುತ್ತಿಗೆ/ ಹೊರಗುತ್ತಿಗೆ/ ನೇರಪಾವತಿ/ಇತರೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ
1	ಪೌರಾಯುಕ್ತರು ದರ್ಜೆ- 1	0	0	0	0
2	ಪೌರಾಯುಕ್ತರು ದರ್ಜೆ- 2	0	0	0	0
3	ಸಹಾಯಕ ಕಾರ್ಯಪಾಲಕ ಅಭಿಯಂತರರು	0	0	0	0
4	ಸೀನಿಯರ್ ಪ್ರೊಗ್ರಾಮರ್	0	0	0	0
5	ಸಹಾಯಕ ಅಭಿಯಂತರರು	0	0	0	0
6	ಪರಿಸರ ಅಭಿಯಂತರರು	120	63	57	3
7	ಮುಖ್ಯಾಧಿಕಾರಿ ದರ್ಜೆ- 1	115	105	10	3
8	ಲೆಕ್ಕ ಅಧೀಕ್ಷಕರು	2	0	2	0
9	ಕಛೇರಿ ವ್ಯವಸ್ಥಾಪಕರು	132	91	41	3
10	ಕಂದಾಯಾಧಿಕಾರಿ	121	81	40	4
11	ಮುಖ್ಯಾಧಿಕಾರಿ ದರ್ಜೆ- 2	126	105	21	3
12	ಅಕೌಂಟೆಂಟ್	123	32	91	155
13	ಕಿರಿಯ ಅಭಿಯಂತರರು	329	117	212	42
14	ಹಿರಿಯ ಆರೋಗ್ಯ ನಿರೀಕ್ಷಕರು	149	72	77	3
15	ಪ್ರಥಮ ದರ್ಜೆ ಸಹಾಯಕರು	329	244	85	4
16	ಸಮುದಾಯ ಸಂಘಟನಾ ಅಧಿಕಾರಿ	252	119	133	7
17	ಶೀಘ್ರಲಿಪಿಗಾರರು	119	1	118	5
18	ಜ್ಯೂನಿಯರ್ ಪ್ರೊಗ್ರಾಮರ್	126	7	119	184
19	ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು	235	124	111	5
20	ನೀರು ಸರಬರಾಜು ಸಹಾಯಕ	544	30	514	162
21	ಕಂಪ್ಯೂಟರ್ಆಪರೇಟರ್/ಡಾಟಾಎಂಟ್ರಿ ಆಪರೇಟರ್	391	10	381	332
22	ಕಿರಿಯ ಆರೋಗ್ಯ ನಿರೀಕ್ಷಕರು	358	144	214	54
23	ಎಲೆಕ್ಟ್ರಿಷಿಯನ್ ದರ್ಜೆ 1	0	0	0	0
24	ಸಮುದಾಯ ಸಂಘಟಕರು	208	59	149	4

25	ದ್ವಿತೀಯ ದರ್ಜೆ ಸಹಾಯಕರು	709	500	209	69
26	ಕರವಸೂಲಿಗಾರರು	360	275	85	90
27	ವಾಹನಚಾಲಕರು	488	51	437	964
28	ಎಲೆಕ್ಟ್ರಿಷಿಯನ್ ದರ್ಜೆ 2	0	0	0	0
29	ಸಹಾಯಕ ನೀರು ಸರಬರಾಜು ಸಹಾಯಕರು	597	29	568	195
30	ಲ್ಯಾಬ್ ಟೆಕ್ನಿಷಿಯನ್	0	0	0	0
31	ಪ್ಲಂಬರ್	119	1	118	17
32	ಸ್ಯಾನಿಟರಿ ಸೂಪರ್‌ವೈಸರ್	353	95	258	60
33	ಹೆಡ್ ಗಾರ್ಡನರ್	0	0	0	0
34	ಸೀನಿಯರ್ ವಾಲ್‌ಮನ್	361	68	293	54
35	ಪೌರಕಾರ್ಮಿಕರು	7568	3229	4339	3192
36	ಅಟೆಂಡರ್	480	326	154	61
37	ಲೋಡರ್	1430	166	1264	535
38	ಕ್ಲೀನರ್	245	24	221	138
39	ಗಾರ್ಡನರ್	121	33	88	28
40	ಹೆಲ್ಪರ್/ವಾಟರ್ ಸಪ್ಲೈ ವಾಲ್‌ಮನ್	1320	593	727	1593
	ಒಟ್ಟು	**17930**	**6794**	**11136**	**7969**

UDD 03 LCQ 2022